# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ

# ಒಳ್ಳೇಯ ಸಮಾರ್ಯದವನು




ಬರಹಗಾರರು: Edward Hughes
ಚಿತ್ರಲೇಖಕರು: M. Maillot; Lazarus
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen; Sarah S.


60ರ 46ನೇ ಕಥೆ


**www.M1914.org**

***Bible for Children,*** *PO Box 3, Winnipeg, MB R3C 2G1 Canada*



**ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.**
**ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.**


ಕನ್ನಡ

Kannada








‘ದೇವರನ್ನು ಮತ್ತು ನಿನ್ನ
ನೆರೆಯವರನ್ನು ಪ್ರೀತಿಸು’
ಎಂದು ಹೇಳಿದನು, ‘ನನ್ನ
ನೆರೆಯವವರು ಯಾರು?’
ಎಂದು ಆತನು
ಕೇಳಿದನು?
3
ಯೇಸು ಆ ಮನುಷ್ಯನ ಪ್ರಶ್ನೆಯನ್ನು ಉತ್ತರರಿಸಲು ಕಥೆಯನ್ನು ಹೇಳಿದನು.
ಅದೇನೆಂದರೆ, ಒಬ್ಬ ಮನುಷ್ಯನು ಯೇರುಸಲೇಮ್
ನಿಂದ ಯೆರಿಕೋಗೆ ಪ್ರಯಾಣ
ಮಾಡುತ್ತಿದ್ದವನು. ಅವನು
ಕಳ್ಳರಿಂದ ಹಿಡಿಯಲ್ಪಟ್ಟನು.
4
ಆ ಕಳ್ಳನು ಎಲ್ಲವನ್ನು ತಕ್ಕೊಂಡು ಕೊನೆಗೆ ಆತನ ಬಟ್ಟೆಯನ್ನು
ತಗೆದುಕೊಂಡು ಹೋದನು.
5
ಅವನಿಗೆ ಚನ್ನಾಗಿ ಗಾಯವಾಗುವಷ್ಟು ಹೊಡೆದು ಅರೆ ಜೀವಮಾಡಿ
ಅವನನ್ನು ರಸ್ತೆಯ ಬದಿಯಲ್ಲಿ ಬಿಟ್ಟು ಹೋದನು.
6
ಆ ದಾರಿಯಲ್ಲಿ ಒಬ್ಬ ಯಾಜಕನು ಬಂದನು, ಅವನು
ಅವನಿಗೆ ಸಹಾಯ ಮಾಡಬಹುದಿತ್ತು.
7
ಆತನು ಹಾಗೆ ಮಾಡದೆ ಆತನ ರಕ್ತ ಸೊರುವುದನ್ನು
ಕಂಡು ಬೇರೆ ರಸ್ತೆಯಿಂದ ಓರೆಯಾಗಿ
ಹೋದನು.
8


ಮತ್ತು ಒಬ್ಬ ಲೇವಿಯನು ಆ ಮಾರ್ಗವಾಗಿ ಬಂದನು, ಅವನು ದೇವಾಲಯದಲ್ಲಿ ಯಾಜಕರಿಗೆ ಸಹಾಯ ಮಾಡುವವನಾಗಿದ್ದನು. ಆ ನೋವಿಂದ ತುಂಬಿದ ಮನುಷ್ಯನನ್ನು ನೋಡಿ ಸಹಾಯ ಮಾಡದೆ ಒರೆಯಾಗಿ ಹೋದನು.
9


ಕೊನೆಗೆ ಸಮಾರ್ಯದವನು ಬಂದನು ಯಹೂದ್ಯರು ಸಮಾರ್ಯದವರನ್ನು ಯಾವಾಗಲೂ ತಿರಸ್ಕರಿಸುತ್ತಿದ್ದರು.
10


ಈ ಕತೆಯನ್ನು ಕೇಳುವಂತ ಜನರು ಆ ಸಮಾರ್ಯದವನು ಕಥೆಯ ನಾಯಕನಾಗುತ್ತಾನೆಂದು ಅವರು ನೆನಸಿರಲಿಲ್ಲ ಆದರೆ ಅವನು ಆತನಿಗೆ ಸಹಾಯ ಮಾಡಲು ಇಚ್ಚೈಸಿದನು.
11


ಆ ಸಮಾರ್ಯದವನು ಬಗ್ಗಿ ಅವನ ಗಾಯಗಳನ್ನು ಒರಸಿ ಅದಕ್ಕೆ ಔಷದಿ ಹಚ್ಚೆ ತನ್ನ ಕತ್ತೆ ಮೇಲೆ ಹೇರಿಸಿಕೊಂಡು ಹೋದನು.
12


ಇಡಿ ರಾತ್ರಿ ಆ ಸಮಾರ್ಯದವನು ಅವನನ್ನು ನೋಡಿಕೊಂಡನು.
13


ಬೆಳಗಾದ ಮೇಲೆ ಅವನನ್ನು ಆ ವೈದ್ಯೆನಿಗೆ ಒಪ್ಪಿಸಿ ಈತನನ್ನು ಚನ್ನಾಗಿ ನೋಡಿಕೊ ಎಂದು ಹೇಳಿದನು.
14













ಒಳ್ಳೆಯ ಸಮಾರ್ಯದವನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಲೂಕ **10**

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ **119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ **3:16**

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.